ಇಬ್ಬರು ಅಣ್ಣಂದಿರು ಒಬ್ಬ ತಮ್ಮನಿದ್ದ. ಅಣ್ಣಂದಿರ ಪತ್ನಿಯರು ಏನೋ ಆಗಿ ಸತ್ತುಹೋಗಿದ್ದರಂತೆ. ಕಿರಿಯ ತಮ್ಮನಿಗಿನ್ನೂ ಮದುವೆಯಾಗಿರಲಿಲ್ಲ. ಬೆಳಗ್ಗೆ ಹಾಲು ಕರೆದಾದಮೇಲೆ ಎಮ್ಮೆಗಳ ಮೈ ತಿಕ್ಕಿ ಸ್ನಾನ ಮಾಡಿಸಿ ಹುಲ್ಲು ನೀರಿನ ಉಸ್ತುವಾರಿ ಮಾಡುತ್ತಿದ್ದರು. ಹಾಲಿನ ದುಡ್ಡು ವಸೂಲಿ, ಮೇವಿನ ಖರೀದಿ ಮುಂತಾದ್ದನ್ನು ದೊಡ್ಡವರಿಬ್ಬರು ನೋಡಿಕೊಳ್ಳುತ್ತಿದ್ದರು. ಖಾಲಿ ಸಮಯದಲ್ಲಿ ಬೇವಿನ ಮರದ ಕೆಳಗೆ ಖಟಿಯಾದಮೇಲೆ ಅಡ್ಡಾಗಿಕೊಂಡು ಬೀಡಿ ಸೇದುತ್ತಾ ಅಂಗೈಯಲ್ಲಿ ತಂಬಾಕು ತಿಕ್ಕುತ್ತಾ ದೊಡ್ಡಸ್ವರದಲ್ಲಿ ಕಾಡು ಹರಟೆಯಲ್ಲಿರುತ್ತಿದ್ದರು.

ಆವತ್ತು ರಾತ್ರಿ ಗಂಡನಿನ್ನೂ ಮಲಗಲು ಬಂದಿರಲಿಲ್ಲ. ಅವಳಿಗೆ ನಿದ್ದೆ ಹತ್ತಿತ್ತು. ಯಾರೋ ಬಳಸಿಕೊಂಡು ಒತ್ತಡ ಏರುತ್ತಿದ್ದ ಅನುಭವಕ್ಕೆ ಎಚ್ಚರಾಯಿತು. ಮೈಗೆ ತಾಗುತ್ತಿದ್ದ ದೊಡ್ಡಮೀಸೆಯಿಂದ ಗಂಡನಲ್ಲ ಅನಿಸಿ ಕೊಸರಿಕೊಂಡು ಎದ್ದಳು. 'ಚುಪ್' ಅನ್ನುವ ಸ್ವರದಿಂದ ಅದು ಗಂಡನ ಅಣ್ಣ ಅನ್ನುವ ಅರಿವಾಗಿ ಹೊರಗೋಡಿ ಬಂದಳು. ಗದ್ದಲಕ್ಕೆದ್ದ ಅತ್ತೆ ಆರೋಪ ಕೇಳಿದವಳು ಅವಳ ಕೈ ಗಟ್ಟಿಯಾಗಿ ಹಿಡಿದುಕೊಂಡು, 'ನೋಡು ಹುಡುಗೀ, ಕುಲಬೀರ ಆದ್ರೇನು ಸುಖಬೀರಾದ್ರೇನು ನಿಂದೇನು ಹೋಗೋದು? ಇಲ್ಲಿ ಅದೆಲ್ಲ ರೂಢಿ. ಎರಡು ಲಕ್ಷ ಸುರುದು ನಿನ್ನನ್ನ ತಂದಿದ್ದು ಸುಮ್ನೆ ಅಲ್ಲ. ಜೀವಂತ ಸುಖವಾಗಿರಬೇಕು ಅಂದ್ರೆ ಸುಮ್ನೆ ಈಗ ರೂಮಿಗೆ ನಡಿ' ಗದರಿಸಿದಳು. ಜೀರ್ಣಿಸಿಕೊಳ್ಳಲಾಗದೆ ರೂಮಿಗೆ ಹೋಗಿ ಬಾಗಿಲು ಭದ್ರ ಮಾಡಿಕೊಂಡು ಮಲಗಿದವಳ ಮೈ ನಡುಗುತ್ತಿತ್ತು. ಅವ್ವನಿಗೆ ಎರಡುಲಕ್ಷ ಕೊಟ್ಟಿದಾರಾ? ಅದಕ್ಕೆ ತನ್ನನ್ನು ಹೇಗೆ ಬೇಕಾದರೂ ಬಳಸಬಹುದಾ ಇವರೆಲ್ಲ? ನಿದ್ದೆ ಬರಲಿಲ್ಲ. ಆದರೆ, ರಾತ್ರಿ ಹೇಗೋ ಮತ್ತೆ ಕೋಣೆಗೆ ಬಂದ ಹಿರಿಯಣ್ಣನಿಗೆ ಅವಳು ಬಗ್ಗಲೇಬೇಕಾಯಿತು. ಮರುದಿನ ಪಕ್ಕದ ಎಮ್ಮೆಹಿಂಡಿನ ಹುಡುಗಿ ಬಹಿರ್ದೆಸೆ ಜಾಗದಲ್ಲಿ ಗುಟ್ಟಾಗಿ ಹೇಳಿದ್ದಳು. ಇಲ್ಲಿ ಹೆಣ್ಣಿನ ಕೊರತೆ ಸಿಕ್ಕಾಪಟ್ಟೆ. ಎಂಟುಹತ್ತು ಲಕ್ಷ ಕೊಟ್ಟರೂ ಸುಮಾರಿನವರು ಮದುವೆಯಾಗೋದು ಕಷ್ಟ. ದಲ್ಲಾಳಿಗಳ ಮೂಲಕ ದಕ್ಷಿಣದಿಂದಲೊ ಛತ್ತೀಸಗಡ ಕಡೆಯಿಂದಲೊ ಹೆಣ್ಣು ತರುತ್ತಾರೆ. ಮನೆಯವರಿಗೆಲ್ಲ ಅವಳೆ ಹೆಂಡತಿ! ಆಮೇಲಾಮೇಲೆ ಏನೂ ಅನಸಲ್ಲ..ರೂಢಿ ಮಾಡಕೋ ಅಂದಿದ್ದಳು. ಮೈ ನಡುಗಿತು. ಶರಣಪ್ಪ ಕಾಕಾ ದೇಶ ಎಲ್ಲ ತಿರುಗಾಡುವವ. ಅವನಿಗಿದು ಗೊತ್ತಿತ್ತ? ಅವ್ವನಿಗೂ ತಿಳಿಸಿದ್ದನ? ಕಾಕಾಗೆ ಗೊತ್ತಿರಲಿಕ್ಕಿಲ್ಲ, ಅವ್ವ ಒಪ್ಪಲು ಸಾಧ್ಯವಿಲ್ಲ ಅಂದಿತು ಮನಸು. ಬೆಳಗ್ಗೆ ಅತ್ತೆ ಹಾಲು ಹಿಂಡುವುದನ್ನು ಕಲಿಸಿದಳು. ಬಕೆಟ್ಟು ಮೊಳಕಾಲ ನಡುವೆ ಸಿಕ್ಕಿಸಿಕೊಂಡು ಮೊಲೆ ಜಗ್ಗುತ್ತಿದ್ದಳು. ಎಮ್ಮೆ ಸಂಭಾಳಿಸುತ್ತ ಎದುರು ನಿಂತ ಕಿರಿಯ ಮೈದುನನ ಕಣ್ಣುಗಳು ಅವಳ ಮೈಮೇಲೆಲ್ಲ ಆಸೆಯಿಂದ ಹರಿದಾಡುತ್ತಿದ್ದವು. ರಾತ್ರಿ ಗಂಡನ ಮತ್ತೊಬ್ಬ ಅಣ್ಣ ಬಂದ. ಪ್ರತಿಭಟನೆಗೆ ಅರ್ಥವಿರಲಿಲ್ಲ. ಮದುವೆ ಮಾಡಿಕೊಂಡವನೆದುರು ಹೇಳಿಕೊಂಡಳು. 'ಕೇಳಿಲ್ಲಿ, ನಾಲ್ಕೂ ಸಹೋದರರ ಸಂಪಾದನೆ ನಿನ್ನ ಸಂತಾನಕ್ಕೇ ಸಿಗತದೆ, ವಾರಗಿತ್ತಿ ಕಾಟವಿಲ್ಲ. ಏನು ಕೆಟ್ಟಿತು?' ಅಂಗೈಯಲ್ಲಿ ತಂಬಾಕು ತಿಕ್ಕುತ್ತ ಕೆಳಸ್ವರದಲ್ಲಿ ಸಮಜಾಯಿಷಿದವ ಹುಬ್ಬು ಗಂಟಿಕ್ಕಿ, 'ಬಾಯಿ ಮುಚ್ಚಿಕೊಂಡು ತೆಪ್ಪಗಿರುವುದನ್ನು ಕಲಿ; ಸುಖವಾಗಿ ಬದಕತೀಯ' ಗದರಿಸಿದ.

ದಿನಗಳು ಎಣಿಸಿದರೂ ಎಣಿಸದಿದ್ದರೂ ಕಳೆಯುತ್ತಿದ್ದವು. ತಿನ್ನಲು ಕುಡಿಯಲು ಕೊರತೆಯಿರಲಿಲ್ಲ. ಆದರೆ, ರಾತ್ರಿಗಳು! ಅದು ಮನಸೊ ಅಭಿಮಾನವೊ ಅವಳಿಗೆ ಅರ್ಥವಾಗುವಂತಹದಲ್ಲ; ಕೆಂಡದಲ್ಲಿ ಬೇಯುತ್ತಿತ್ತು. ಇಬ್ಬಿಬ್ಬರನ್ನು ಸಂಭಾಳಿಸಿದ ರಾತ್ರಿಯೂ ಇರುತ್ತಿತ್ತು. ಆಧಾರ್ ಮತ್ತು ವೋಟರ್ ಕಾರ್ಡುಗಳನ್ನು ಬರುವಾಗಲೇ ಇಸಿದಿಟ್ಟುಕೊಂಡಿದ್ದರು. ಅವಳೆ ಖರೀದಿಸಿದ ಮೂರಿಂಚುದ್ದದ ಹಳೆಕಾಲದ ಮೊಬೈಲ್ ಇತ್ತು. ಅದನ್ನು ವಶದಲ್ಲಿಟ್ಟುಕೊಂಡಿದ್ದರು. ಅವಳನ್ನು ಒಂಟಿಯಾಗಿ ಬಿಡುತ್ತಿರಲಿಲ್ಲ. ಕಾವಲಿಗೆ ಸದಾ ಒಬ್ಬರಿರುತ್ತಿದ್ದರು. ಪತ್ರ ಬರೆಯಬೇಕು ಅಂತ ಕುಲಬೀರನ ಹತ್ತಿರ ಗೋಗರೆದದ್ದಕ್ಕೆ ತಾನು ನಿನ್ನ ತಾಯಿಗೆ ಪತ್ರ ಬರೆದು ಕ್ಷೇಮ ತಿಳಿಸಿದ್ದೇನೆ ಅಂದವ ಆಮೇಲೇನೆನಿಸಿತೊ